ತೊಂದರೆಗಳು ಏನು ಬಂತು? ಇವರು ಟ್ರಾನ್ಸ್‌ಫರ್ ಮಾಡಿಕೊಂಡು ಇಲ್ಲಿ ಕುಳಿತರು; ಅಧಿಕಾರಿಗಳು ಒಬ್ಬರು ಚೇರ್ ಮೇಲೆ ಇರಲಿಲ್ಲ. ನಾವು ಇದೆಲ್ಲವನ್ನೂ ಡಿಮಾಂಡ್ಸ್ ಮೇಲೆ ಮಾತನಾಡುವುದಕ್ಕೆ ಆಗುತ್ತದೇನು? ನಾವು ಇದನ್ನು ನಿಲುವಳಿ ಸೂಚನೆಯ ಮುಖಾಂತರ ಕೇಳಬಾರದೇನು?

ಅಧ್ಯಕ್ಷರು: ಈಗ ಮಾನ್ಯ ಸಚಿವರು ಸದನಕ್ಕೆ ಬರುತ್ತಾರೆ. ತಾವು ಈಗ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆ ಒಂದು ಡೀಟೈಲ್ ಸ್ಟೇಟ್‌ಮೆಂಟ್ ಮಾಡುತ್ತಾರೆ. ಈಗ ಬೇರೆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ.ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ ಆಗುವುದಿಲ್ಲ.

ಅಧ್ಯಕ್ಷರು: ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಸರಿಯಾದಂತಹ ಉತ್ತರವನ್ನು ಇನ್ನು ಒಂದು ಗಂಟೆಯೊಳಗಾಗಿ ಕೊಡಿಸುತ್ತೇವೆ. ದಯಮಾಡಿ ತಮಗೆ ಸ್ವಲ್ಪ ತಾಳ್ಮೆ ಇರಲಿ.

ಅಧ್ಯಕ್ಷರು: ಈಗ ಸರ್ಕಾರದವರು ಒಂದು ಗಂಟೆಯ ಕಾಲಾವಕಾಶವನ್ನು ಕೇಳುತ್ತಿದ್ದಾರೆ. ಈ ಒಂದು ಗಂಟೆಯಾದ ಮೇಲೆ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತಾರೆ; ಅನಂತರ ಅದರ ಮೇಲೆ ತಾವು ಕ್ಲಾರಿಫಿಕೇಶನ್ ಅನ್ನು ಕೇಳಬಹುದು.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಷಯದ ಬಗ್ಗೆ ನಾವೆಲ್ಲರೂ ಕೂಡ ಪ್ರಸ್ತಾಪ ಮಾಡಿದ್ದೇವೆ. ಈ ವಿಷಯದ ಗಂಭೀರತೆಯ ಬಗ್ಗೆಯೂ ಹೇಳಿದ್ದೇವೆ. ಎಲ್ಲಾ ಶಾಸಕರೂ ಕೂಡ ತಿಳಿಸಿ ಹೇಳಬೇಕಾಗಿದೆ. ಇದು ಗಂಭೀರವಾದಂತಹ ಪ್ರಶ್ನೆಯಾಗಿದೆ. ಇವತ್ತು ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ. ಈ ಸರ್ಕಾರಕ್ಕೆ ಬಿತ್ತನೆ ಬೀಜ, ಗೊಬ್ಬರವನ್ನು ಕೊಡುವಂತಹ ರೀತಿಯಲ್ಲಿ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಲ್ಲ. ಕೇವಲ ಘೋಷಣೆಗಳ ಮುಖಾಂತರ "ಅಭಿವೃದ್ಧಿ ರಂಗ" ಎಂದು ಹೇಳುತ್ತಿದ್ದಾರೆ. ಇವತ್ತು ಮಾನ್ಯ ಪ್ರಕಾಶ್‌ರವರೆ, ತಾವೂ ಕೂಡ ರಕ್ಷಣೆಗೆ ಬರುತ್ತಾ ಇಲ್ಲ. ಅದಕ್ಕೆ ನಾವು ಪ್ರತಿಭಟನೆಯನ್ನು ಮಾಡುತ್ತೇವೆ, ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರುಗಳು ಸಭಾತ್ಯಾಗವನ್ನು ಮಾಡಿದರು)

(ಮಾನ್ಯ ಸದಸ್ಯರುಗಳು ರೈತ ವಿರೋಧ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಾ ಸದನದಿಂದ ಹೊರನಡೆದರು)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ವಿಷಯವನ್ನು ಪ್ರಸ್ತಾಪ ಮಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ: ಶ್ರೀ ಜಮೀರ್ ಅಹಮದ್ ಖಾನ್‌ರವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವಾಗ, ಕನ್ನಡದಲ್ಲಿ ಸ್ವೀಕರಿಸಿಲ್ಲ, ಜೊತೆಗೆ 'ಸತ್ಯ' ಹಾಗೂ 'ಭಗವಂತನ! ಹೆಸರಿನಲ್ಲಿ ಎನ್ನದೆ ಶ್ರೀ ಕುಮಾರ್ ಸ್ವಾಮಿಯವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಈ ರಾಜ್ಯದ ಮಂತ್ರಿಮಂಡಲ ವಿಸ್ತರಣೆಯಾಯಿತು. ಅದರಲ್ಲಿ ಕೆಲವು ಸಚಿವರು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದಾಗ, ಅದರಲ್ಲಿ ಮಾನ್ಯ ಜಮೀರ್ ಅಹಮದ್ ಖಾನ್‌ರವರು ನನ್ನ ಸ್ನೇಹಿತರು, ಇವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ಭಾವನೆ ಇಲ್ಲ. ಇವರು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದು, ಕನ್ನಡ ಭಾಷೆಯಲ್ಲಿ ಅಲ್ಲ. ನಮ್ಮ ರಾಜ್ಯದ ಭಾಷೆಯಲ್ಲಿ ಅಲ್ಲ, ಇವರು ನಮ್ಮ ರಾಜ್ಯದ ಮಂತ್ರಿಗಳಾಗಿ ಪ್ರಮಾಣ ವಚನವನ್ನು ಸ್ವೀಕಾರವನ್ನು ಮಾಡಿರುವುದು. ಇವರು ದೆಹಲಿಯ ಅಥವಾ ರಾಷ್ಟ್ರದ ಬೇರೆ ಯಾವುದೋ ಒಂದು ರಾಜ್ಯದ, ಅಥವಾ ಬೇರೆ ಕಡೆಯಲ್ಲಿ ಮಂತ್ರಿಯಾಗಿ ಇರಲಿಲ್ಲ. ಅವರು ಮಾತನಾಡುವಾಗ ಇಂಗ್ಲೀಷ್‌ನಲ್ಲಿ ಪ್ರಮಾಣ ವಚನವನ್ನು ಪಡೆದರು. ಇದು ನನಗೆ ಬಹಳ ಅತ್ಯಂತ, ನೋವು ಆಯಿತು. ಇದು ಈ ರಾಜ್ಯಕ್ಕೆ ಮಾಡಿರುವಂತಹ ಅತ್ಯಂತ ಅಪಮಾನ, ಮತ್ತು ಅಗೌರವ ಆಗಿದೆ. ಇವರು ಪ್ರಮಾಣ ವಚನ ತೆಗೆದುಕೊಂಡ ದಿಕ್ಕು ಸರಿಯಾಗಿ ಇಲ್ಲ. ಇಲ್ಲಿ ಒಂದು ಸತ್ಯದ ಹೆಸರಿನಲ್ಲಿ, ಇನ್ನೊಂದು ಭಗವಂತನ ಹೆಸರಲ್ಲಿ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಶ್ರೀ ಕುಮಾರಸ್ವಾಮಿಯವರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು. ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಎಲ್ಲೂ ಕುಮಾರಣ್ಣ ಇರಬಹುದು, ದೇವರಣ್ಣ ಇರಬಹುದು, ಯಾವ ಅಣ್ಣಗಳು ಬರುವುದಿಲ್ಲ. ಅಲ್ಲಿ ಸತ್ಯ ಮತ್ತು ದೇವರು ಎರಡು ಇರುವಂಥಾದ್ದು, ಅದನ್ನು ತಾವು ನೋಡಿದರೂ ಇಲ್ಲವೋ ಗೊತ್ತಿಲ್ಲ. ಇಲ್ಲಿ ರಾಜ್ಯಪಾಲರು ಯಾವ ರೀತಿಯಲ್ಲಿ ನೋಡಿದರೋ ಗೊತ್ತಿಲ್ಲ. ಇವರು ನಿಜವಾಗಿಯೂ ಪ್ರಮಾಣ ವಚನವನ್ನು ತೆಗೆದುಕೊಂಡಿಲ್ಲ. ಇದನ್ನು ನಾವು ಪ್ರಮಾಣವಚನವೆಂದು